# ಪತ್ರಿಕಾ ಪ್ರಕಟಣೆ

ಆನೇಕಲ್ ಉಪ ವಿಭಾಗ

ಸರ್ಜಾಪುರ ಪೊಲೀಸ್ ಠಾಣೆ

**ಸರ್ಜಾಪುರ ಪೊಲೀಸ್ ಠಾಣೆಯ ಪೊಲೀಸರಿಂದ ಅಂತರ ರಾಜ್ಯ ದ್ವಿಚಕ್ರ ವಾಹನ ಕಳ್ಳರನ್ನು ಬಂಧಿಸಿ ಅವರಿಂದ ಸುಮಾರು 40,00,000/- ರೂ ಬೆಲೆಯ 25 ದ್ವಿಚಕ್ರ ವಾಹನಗಳ ಜಪ್ತಿ**

ಸರ್ಜಾಪುರ ಪೊಲೀಸ್ ಠಾಣೆ ವ್ಯಾಪ್ತಿ ಮತ್ತು ಸುತ್ತಮುತ್ತಲಿನ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಗಳ ಕಳ್ಳತನ ಹೆಚ್ಚಾಗಿ ವರದಿಯಾಗುತ್ತಿದ್ದು, ಇವುಗಳ ಕಳ್ಳತನ ಮಾಡುವವರ ಪತ್ತೆಗಾಗಿ ಮಾನ್ಯ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ಮಲ್ಲಿಕಾರ್ಜುನ ಬಾಲದಂಡಿ ಮತ್ತು ಮಾನ್ಯ ಅಪರ ಪೊಲೀಸ್ ಅಧೀಕ್ಷಕರಾದ ಶ್ರೀ ಎಂ ಎಲ್ ಪುರುಷೋತ್ತಮ್ ರವರ ಮಾರ್ಗದರ್ಶನದಲ್ಲಿ ಮಾನ್ಯ ಆನೇಕಲ್ ಉಪ ವಿಭಾಗದ ಮಾನ್ಯ ಡಿವೈಎಸ್ಪಿ ರವರಾದ ಶ್ರೀ ಎ.ವಿ ಲಕ್ಷ್ಮಿ ನಾರಾಯಣ್ ರವರ ನೇತೃತ್ವದಲ್ಲಿ ಸರ್ಜಾಪುರ ಪೊಲೀಸ್ ಠಾಣೆ ಇನ್ಸ್ ಪೆಕ್ಟರ್ ಮಂಜು ಎಸ್ ಎಸ್ ಮತ್ತು ಪ್ರೋ. ಸಬ್ ಇನ್ಸ್ ಪೆಕ್ಟರ್ ದುಂಡಪ್ಪ ಬಾರ್ಕಿ ಸಿಬ್ಬಂದಿಯವರಾದ ಪಿಸಿ 1387 ಪ್ರಭುಕುಮಾರ್, ಪಿಸಿ 903 ಸಂತೋಷ್ ಕುಮಾರ್ ರವರ ತಂಡವನ್ನು ರಚಿಸಿ ತನಿಖೆ ಕೈಗೊಳ್ಳಲಾಗಿತ್ತು.

ದಿನಾಂಕ 07/09/2022 ರಂದು ರಾತ್ರಿ 8-30 ಗಂಟೆಗೆ ಖಚಿತ ವರ್ತಮಾನದ ಮೇರೆಗೆ ಸರ್ಜಾಪುರ ಪೊಲೀಸ್ ಠಾಣೆ ಸರಹದ್ದು ಹಂದೇನಹಳ್ಳಿ ರಸ್ತೆಯಲ್ಲಿರುವ ಕ್ರಾಂತಿ ಲೇಔಟ್ ಬಳಿ ದರೋಡೆ ಮಾಡಲು ಸುಮಾರು 4-5 ಜನರು ಸಿದ್ದತೆ ಮಾಡಿಕೊಂಡಿದ್ದಾರೆ ಎಂಬ ಮಾಹಿತಿ ಆಧಾರದ ಮೇಲೆ ಸರ್ಜಾಪುರ ಪೊಲೀಸ್ ಠಾಣೆ ಇನ್ಸ್ ಪೆಕ್ಟರ್ ಮತ್ತು ಅವರ ಸಿಬ್ಬಂದಿಯವರು ದರೋಡೆ ಮಾಡಲು ಹೊಂಚುಹಾಕಿದ್ದ ಆರೋಪಿಗಳ ಮೇಲೆ ದಾಳಿ ಮಾಡಿ ಅವರ ಬಳಿ ಇದ್ದ ಮಾರಾಕಾಸ್ರಗಳನ್ನು ಅಮಾನತ್ತುಪಡಿಸಿಕೊಂಡಿದ್ದು ಆರೋಪಿಗಳ ಮೇಲೆ ಸರ್ಜಾಪುರ ಪೊಲೀಸ್ ಠಾಣೆ ಮೊ ನಂ 233/2022 ಕಲಂ 399-402 ಐಪಿಸಿ ರಿತ್ಯ ಪ್ರಕರಣ ದಾಖಲಾಗಿದ್ದು ತನಿಖೆ ಕೈಗೊಂಡಿರುತ್ತೆ.

ಆರೋಪಿಗಳ ವಿಚಾರಣೆ ಕಾಲದಲ್ಲಿ ಆರೋಪಿಗಳು ತಾವು ಸರ್ಜಾಪುರ, ಹೊಸಕೋಟೆ, ಚಂದಾಪುರ, ಹೊಸೂರು, ಬಾಗಲೂರು, ಮಾಲೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸುಮಾರು 25 ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿರುವುದಾಗಿ ತಿಳಿಸಿರುತ್ತಾರೆ.

ಎ-1 ಪ್ರಕಾಶ್ ರಾಜ್ @ ಮಧನ ಬಿನ್ ಕೃಷ್ಣಪ್ಪ, 25 ವರ್ಷಮ ಪರಿಶಿಷ್ಟ ಜಾತಿ, ಡ್ರೈವರ್ ಕೆಲಸ ವಾಸ- ಮೂಕಂಡಪಲ್ಲಿ, ಅಣ್ಣನಗರ, ಹೊಸೂರು ತಾಲ್ಲೂಕು, ಕೃಷ್ಣಗಿರಿ ಜಿಲ್ಲೆ, ತಮಿಳುನಾಡು

ಎ-2 ಗೋಪಿ @ ಲೌವ್ಲಿ ಬಿನ್ ಕೊಂಡಪ್ಪ, 20 ವರ್ಷ, ಬಲಜಿಗ ನಾಯ್ಡು ಜನಾಂಗ, ವಿದ್ಯಾರ್ಥಿ ವಾಸ- ರಾಜು ನಗರ, ಚೊಕ್ಕರಸನಹಳ್ಳಿ, ಬಾಗಲೂರು ಪೋಸ್ಟ್, ಹೊಸೂರು ತಾಲ್ಲೂಕು, ಕೃಷ್ಣಗಿರಿ ಜಿಲ್ಲೆ, ತಮಿಳುನಾಡು

ಎ-3 ಮಹಮದ್ ಶಾಹಿದ್ ಬಿನ್ ಚೋಟೆ ಸಾಬ್, 24 ವರ್ಷ, ಮುಸ್ಲಿಂ ಜನಾಂಗ, ವ್ಯಾಪಾರ ವಾಸ- ಕಾಜಿ ಮೊಹಲ್ಲಾ, ಮಸಣದ ಹತ್ತಿರ, ಹೊಸಕೋಟೆ ಟೌನ್,

ಎ-4 ನಂದೀಶ ಬಿನ್ ಸಂಪಂಗಿ, 19 ವರ್ಷ, ಪರಿಶಿಷ್ಟ ಜಾತಿ, ಕೂಲಿ ಕೆಲಸ ವಾಸ- ತಿರುಪಾಳ್ಯ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು

ಎ-5 ನವೀನ್ ಕುಮಾರ್ @ ಬುಜ್ಜಿ ಬಿನ್ ಕೃಷ್ಣಪ್ಪ, 24 ವರ್ಷ, ಬಲಜಿಗರು, ವ್ಯವಸಾಯ ವಾಸ- ಕೊತ್ತಪಲ್ಲಿ ಗ್ರಾಮ, ಸೇವಗಾನಪಲ್ಲಿ ಪೋಸ್ಟ್, ಹೊಸೂರು ತಾಲ್ಲೂಕು, ಕೃಷ್ಣಗಿರಿ ಜಿಲ್ಲೆ, ತಮಿಳುನಾಡು

ಮೇಲ್ಕಂಡ ಆರೋಪಿಗಳಲ್ಲಿ ಎ-1 ಆರೋಪಿ ಮೇಲೆ ಈ ಹಿಂದೆ ಅತ್ತಿಬೆಲೆ ಮತ್ತು ಶಿಪ್ ಕಾಟ್ ಪೊಲೀಸ್ ಠಾಣೆಯಲ್ಲಿ ದ್ವಿಚಕ್ರ ವಾಹನ ಕಳವು ಪ್ರಕರಣ ದಾಖಲಾಗಿದ್ದು, ಎ-2 ಮತ್ತು ಎ-4 ಆರೋಪಿಗಳ ಮೇಲೆ ಬೆಂಗಳೂರು ನಗರದ ಕೆಪಿ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ದ್ವಿಚಕ್ರ ವಾಹನ ಕಳವು ಪ್ರಕರಣ ದಾಖಲಾಗಿರುತ್ತೆ. ಆರೋಪಿ-1 ಮತ್ತು ಆರೋಪಿ-2 ರವರು ಉಳಿದ ಆರೋಪಿಗಳನ್ನು ತನ್ನ ಜೊತೆ ಸೇರಿಸಿಕೊಂಡು ತಂಡ ರಚನೆ ಮಾಡಿಕೊಂಡು ರಾತ್ರಿ ವೇಳೆಯಲ್ಲಿ ಮನೆಯ ಹೊರಗೆ ನಿಲ್ಲಿಸಿರುವ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿಕೊಂಡು ಹೋಗುತ್ತಿದ್ದು, ದ್ವಿಚಕ್ರ ವಾಹನಗಳಿಗೆ ಹ್ಯಾಂಡಲ್ ಲಾಕ್ ಹಾಕಿದ್ದರೂ ಸಹ ಬಲಪ್ರಯೋಗದಿಂದ ಮುರಿದು, ಅವರ ಬಳಿ ಇದ್ದ ಪ್ಲಗ್ ನ ಸಹಾಯದಿಂದ ಕೀ ಇಲ್ಲದೆ ದ್ವಿಚಕ್ರ ವಾಹನಗಳನ್ನು ಸ್ಟಾರ್ಟ್ ಮಾಡಿ ಕಳ್ಳತನ ಮಾಡಿಕೊಂಡು ಹೋಗಿ ದ್ವಿಚಕ್ರ ವಾಹನಗಳನ್ನು ಮಾರಾಟ ಮಾಡಿ ಅದರಿಂದ ಬರುತ್ತಿದ್ದ ಹಣದಿಂದ ಎಲ್ಲರೂ ಮೋಜು ಮಸ್ತಿ ಮಾಡಿಕೊಂಡಿರುತ್ತಾರೆ.

1] ಸರ್ಜಾಪುರ ಪೊಲೀಸ್ ಠಾಣೆಯ 8 ಕಳ್ಳತನ ಪ್ರಕರಣಗಳು,
2]ಮಾಲೂರು ಪೊಲೀಸ್ ಠಾಣೆಯ 5 ಕಳ್ಳತನ ಪ್ರಕರಣಗಳು,
3] ಹೊಸಕೋಟೆ ಪೊಲೀಸ್ ಠಾಣೆಯ 1 ಕಳ್ಳತನ ಪ್ರಕರಣ,
4] ಹೊಸೂರಿನ 4 ಕಳ್ಳತನ ಪ್ರಕರಣಗಳು,
5] ಬಾಗಲೂರು ಪೊಲೀಸ್ ಠಾಣೆಯ 3 ಕಳ್ಳತನ ಪ್ರಕರಣಗಳು
6] ಸೂರ್ಯ ಸಿಟಿ ಪೊಲೀಸ್ ಠಾಣೆಯ 1 ದ್ವಿಚಕ್ರ ವಾಹನ ಕಳ್ಳತನ ಪ್ರಕರಣಗಳು ಪತ್ತೆಯಾಗಿರುತ್ತವೆ